International Journal of Kannada Research
www.kannadajournal.com

ISSN: 2454–5813
IJKR 2019; 5(2): 158-162
© 2019 IJKR
www.kannadajournal.com
Received: 10-02-2019
Accepted: 12-03-2019

**ಡಾ. ಮಲ್ಲೇಶಪ್ಪ ಸಿದ್ರಾಂಪೂರ**
ಸಹಾಯಕ ಸಂಪಾದಕ
ಪ್ರಕಾಶನ ಕೇಂದ್ರ
ದ್ರಾವಿಡ ವಿಶ್ವವಿದ್ಯಾಲಯ

**Correspondence**
**ಡಾ. ಮಲ್ಲೇಶಪ್ಪ ಸಿದ್ರಾಂಪೂರ**
ಸಹಾಯಕ ಸಂಪಾದಕ
ಪ್ರಕಾಶನ ಕೇಂದ್ರ
ದ್ರಾವಿಡ ವಿಶ್ವವಿದ್ಯಾಲಯ

# ಕನ್ನಡ ದಲಿತ ಆತ್ಮಕಥೆಗಳು

**ಡಾ. ಮಲ್ಲೇಶಪ್ಪ ಸಿದ್ರಾಂಪೂರ**

ಈ ಲೇಖನದ ಉದ್ದೇಶ ಕನ್ನಡದಲ್ಲಿ ಬಂದ ದಲಿತ ಆತ್ಮಕಥೆಗಳನ್ನು ಪರಿಚಯಿಸುವುದಲ್ಲ. ಬದಲಾಗಿ ಕನ್ನಡದ ದಲಿತ ಆತ್ಮಕಥೆಗಳಲ್ಲಿ ವ್ಯಕ್ತವಾದ ಶೋಷಿತ ಸಮುದಾಯಗಳ ಬದುಕನ್ನು ಆತ್ಮಕಥನಕಾರರು ಕಂಡುಂಡ ಅನುಭವಗಳ ಹಿನ್ನೆಲೆಯಲ್ಲಿ ಅಭಿವ್ಯಕ್ತಿಸಿದ ಕ್ರಮವನ್ನು ಕುರಿತು ಪರಾಮರ್ಶಿಸುವುದು. ಏಕೆಂದರೆ ದಲಿತ ಆತ್ಮಕಥೆಗಳು ಕೇವಲ ವೈಯುಕ್ತಿಕ ನೆಲೆಯಲ್ಲಿ ನಿಲ್ಲದೆ ದಲಿತರ ಸಾಂಸ್ಕೃತಿಕ ಚರಿತ್ರೆಯ ಸಂಕಥನಗಳಾಗಿವೆ. ಹಾಗಾಗಿ ಕನ್ನಡ ದಲಿತ ಆತ್ಮಕಥೆಗಳು ಕಟ್ಟಿಕೊಡುವ ದಮನಕ್ಕೊಳಗಾದ ಲೋಕದ ಬದುಕಿನ ಅನಾವರಣವನ್ನು ಅರಿತುಕೊಳ್ಳಬೇಕಾಗಿದೆ. ಜೊತೆಗೆ ಅವು ಕೇವಲ ಒಬ್ಬ ವ್ಯಕ್ತಿಯ ವೈಯುಕ್ತಿಕ ಬದುಕಿನ ವಿವರಗಳಿಗೆ ಮಾತ್ರ ಸೀಮಿತವಾಗದೆ, ಓದುಗನೊಂದಿಗೆ ಸಂವಾದಕ್ಕಿಳಿಯುತ್ತವೆ. ಆ ಮೂಲಕ ಹೊಸಹೊಸ ಸಂವೇದನೆಗಳನ್ನು ಹುಟ್ಟುಹಾಕುತ್ತವೆ.

ಕನ್ನಡದಲ್ಲಿ ದಲಿತ ಆತ್ಮಕಥೆಗಳು ಹುಟ್ಟಿಕೊಂಡದ್ದು ಬಹು ತಡವಾಗಿ. ಕನ್ನಡ ದಲಿತ ಸಾಹಿತ್ಯ ಹುಟ್ಟಿಕೊಳ್ಳಲು ಹೇಗೆ ಬೇರೆ ಭಾಷೆಯ ಸಾಹಿತ್ಯ, ವ್ಯಕ್ತಿಗಳ ಪ್ರಭಾವ ಕಾರಣವಾಯಿತೋ ಹಾಗೆಯೇ ಆತ್ಮಕಥೆಗಳು ಹುಟ್ಟಿಕೊಳ್ಳಲು ಅನ್ಯ ಭಾಷೆಯ ಆತ್ಮಕಥೆಗಳು ಪ್ರಮುಖ ಕಾರಣವಾಗಿವೆ. ಅದರಲ್ಲೂ ವಿಶೇಷವಾಗಿ ಮರಾಠಿ ದಲಿತ ಆತ್ಮಕಥೆಗಳು ಪ್ರಮುಖವಾದವುಗಳು. ಹಾಗೆಯೇ ಅಂಬೇಡ್ಕರ್ ಅವರ ಬದುಕು ಮತ್ತು ಬರಹ ಕನ್ನಡ ದಲಿತ ಸಾಹಿತ್ಯಕ್ಕೆ ಮುಖ್ಯ ಪ್ರೇರಣೆಯಾದರೆ ಅದಕ್ಕೆ ಪೂರಕವಾಗಿ ಇತರೆ ಭಾಷೆಯ ಸಾಹಿತ್ಯ ಮತ್ತು ಅನೇಕ ಸಾಮಾಜಿಕ ಚಳುವಳಿಗಳು ಪ್ರೇರಕವಾದವು ಎನ್ನುವುದು ತಿಳಿದಿರುವ ಸಂಗತಿ. ಹೀಗೆ ಭಿನ್ನ ವಿಚಾರಗಳ ಪ್ರಭಾವ ಮತ್ತು ಪ್ರೇರಣೆಯಿಂದ ಹುಟ್ಟಿಕೊಂಡ ಕನ್ನಡ ದಲಿತ ಸಾಹಿತ್ಯ ಆರಂಭದಲ್ಲಿ ಕಾವ್ಯದ ಮೂಲಕ ಗುರುತಿಸಿಕೊಂಡಿತು. ನಂತರದಲ್ಲಿ ಸಾಹಿತ್ಯದ ಇತರೆ ಪ್ರಕಾರಗಳಲ್ಲಿಯೂ ತನ್ನ ಒಡಲಾಳದ ನೋವನ್ನು ಹೊರಹಾಕಿತು. ಆ ನೋವು ಕೇವಲ ವೈಯುಕ್ತಿಕವಾಗಿರದೆ ಸಾಮುದಾಯಿಕ ನೆಲೆಯಲ್ಲಿ ರೂಪುಗೊಂಡಿದ್ದು ಎನ್ನುವುದು ಸರ್ವವಿಧಿತ ವಿಚಾರ. ಈ ಸಾಮುದಾಯಿಕತೆಯು ನಂತರ ಕಾಲದಲ್ಲಿ ರಚನೆಗೊಂಡ ಆತ್ಮಕಥೆಗಳಲ್ಲಿಯೂ ಕಾಣಿಸಿಕೊಂಡಿತು. ಹಾಗಾಗಿ ದಲಿತ ಲೋಕದ ಕತ್ತಲೆಯ ಬದುಕನ್ನು ಅದೇ ಕತ್ತಲೆಯಿಂದ ಹೊರಬಂದ ಅನೇಕರು ಚಿತ್ರಿಸಿದರು. ಇವರ ಆತ್ಮಕಥೆಗಳು ಅತಿರಂಜಕತೆಯನ್ನಾಗಲಿ, ಬೌದ್ಧಿಕತೆಯನ್ನಾಗಲಿ ತೋರಿಸುವುದಿಲ್ಲ. ಬದಲಾಗಿ ತಾವು ಮತ್ತು ತಮ್ಮವರು ಅನುಭವಿಸಿದ ಬದುಕನ್ನು ಯಥಾವತ್ತಾಗಿ ಅಕ್ಷರ ರೂಪಕ್ಕಿಳಿಸಿದವು. ಮೇಲ್ನೋಟಕ್ಕೆ ಅವು ಆತ್ಮಕಥೆಗಳೆನಿಸಿದರೂ, ಅವು ಕೇವಲ ಆತ್ಮಕಥೆಗಳಲ್ಲ; ದಲಿತ ಸಮುದಾಯದ ಚಾರಿತ್ರಾತ್ಮಕ ಸಾಂಸ್ಕೃತಿಕ ಸಂಕಥನಗಳು. ಏಕೆಂದರೆ ಅವು ತಲತಲಾಂತರದಿಂದ ನಾಗರಿಕ ಸಮಾಜದಿಂದ ದೂರವುಳಿದವರ, ನಿರಂತರ ಶೋಷಣೆಗೆ ಗುರಿಯಾದವರ, ಅಸ್ತಿತ್ವವೇ ಇಲ್ಲದವರಂತೆ ಬದುಕಿದವರ, ಮೇಲ್ವರ್ಗದವರ ಸೇವೆಯಲ್ಲಿಯೇ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡವರ, ಹಿಡಿ ಅನ್ನಕ್ಕಾಗಿ ದಿನವಿಡೀ ದುಡಿದು ಬಸವಳಿದವರ ಬದುಕಿನ ಚರಿತ್ರೆಯನ್ನು ಸಾರುತ್ತವೆ. ಹಾಗಾಗಿ ದಲಿತ ಆತ್ಮಕಥೆಗಳಲ್ಲಿ ಬಡನತದ ಭೀಕರತೆಯ ಚಿತ್ರಣವಿದೆ; ಶೋಷಣೆಯ ಬಗೆಗಿನ ಅಸಮಾಧಾನವಿದೆ; ವ್ಯವಸ್ಥೆಯ ಅಟ್ಟಹಾಸವಿದೆ; ದಾಸ್ಯದ ಬದುಕಿನ ಅನಾವರಣವಿದೆ; ದಲಿತರ ಬದುಕನ್ನು ಆವರಿಸಿಕೊಂಡಿರುವ ಮೌಢ್ಯಗಳ ವಿವರಗಳಿವೆ; ತಮ್ಮತನಕ್ಕಾಗಿ, ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕೆನ್ನುವ ಹಪಾಹಪಿಯಿದೆ; ತಾವೂ ಮನುಷ್ಯರೂ ಎಂದು ಒತ್ತಿ ಹೇಳಿದ ಅಸ್ಮಿತೆಯ ಹುಡುಕಾಟವಿದೆ; ತಾವು ಸಮಾಜದ ಒಂದು ಭಾಗವೆಂದು ಗುರುತಿಸಿಕೊಳ್ಳಬೇಕೆನ್ನುವ ಹಂಬಲವಿದೆ... ಈ ಎಲ್ಲ ಅಂಶಗಳು ಕನ್ನಡ ದಲಿತ ಆತ್ಮಕಥೆಗಳಲ್ಲಿ ಅಭಿವ್ಯಕ್ತಗೊಂಡ ವಿಧಾನವನ್ನು, ಅನಾವರಣಗೊಂಡ ಬಗೆಯನ್ನು ಗುರುತಿಸಬೇಕಾಗಿದೆ.

"ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕತಗಳನ್ನು ಹುಟ್ಟಿಸುತ್ತದೆ. ಒಂದು ಹೊಸ ಲೋಕವೊಂದರ ಶೋಧನೆ ಎಂಬ ಕಾರಣಕ್ಕೆ ಆಸಕ್ತಿ ಹುಟ್ಟಿಸುತ್ತದೆ. ಸವರ್ಣೀಯ

ಸಮಾಜದ ಹಿಂಸೆ ಆತ್ಮಕಥನದ ಸಾಹಿತ್ಯಾಕೃತಿಯಲ್ಲಿಯೇ ಎದ್ದು ಕಾಣುತ್ತದೆ ಎಂಬ ಕಾರಣಕ್ಕೆ ಆತಂಕವಾಗುತ್ತದೆ. ಮಹಾರಾಷ್ಟ್ರೀಯ ಅಥವಾ ಕನ್ನಡದ ದಲಿತ ಲೇಖಕರ ಆತ್ಮಕಥನಗಳನ್ನು ಓದಿದಾಗ ಒಂದು 'ಬೋನ್ಸಾಯ್' ಮರವನ್ನು ಕಂಡು ಅನುಭವವಾಗುತ್ತದೆ. ಇಲ್ಲಿ ಒಂದು ಚಿಕ್ಕ ಆತ್ಮಕಥನದಲ್ಲಿ ಹಲವು ಕಾದಂಬರಿಗಳೇ ಸಂಕ್ಷಿಪ್ತೀಕರಣಕ್ಕೆ ಒಳಗಾಗುತ್ತವೆ." 'ಊರುಕೇರಿ' ಆತ್ಮಕಥೆಗೆ ಸಂಬಂಧಿದಂತೆ ಡಿ.ಆರ್.ನಾಗರಾಜ್ ಹೇಳಿರುವ ಈ ಮಾತು ಬಹುಶಃ ಎಲ್ಲ ದಲಿತ ಆತ್ಮಕಥೆಗಳಿಗೂ ಅನ್ವಯಿಸುತ್ತದೆ. ಅಂದರೆ ದಲಿತ ಆತ್ಮಕಥೆಗಳ ಹರವು ವಿಸ್ತಾರವಾದುದು. ಅದು ಇಡೀ ಸಮಯದಾಯದ ಬದುಕಿನ ಬವಣೆಯನ್ನು ಒಳಗೊಂಡಿರುವುದರಿಂದ, ಆ ಸಮುದಾಯದ ನೋವು ನಲಿವುಗಳನ್ನು ಚಿತ್ರಿಸಿರುವುದರಿಂದ, ಕಷ್ಟ ಕೋಟಲೆಗಳನ್ನು ಅನಾವರಣಗೊಳಿಸಿರುವುದರಿಂದ, ಹಸಿವು-ಬಡತನಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದರಿಂದ... ಹೀಗೆ ಅನೇಕ ಕಾರಣಗಳಿಂದ ದಲಿತ ಆತ್ಮಕಥೆಗಳು ಕಿರಿದರಲ್ಲಿ ಹಿರಿದರ್ಥವನ್ನು ಒಳಗೊಂಡಿವೆ. ಅವುಗಳ ಅಧ್ಯಯನ ವ್ಯಕ್ತಿಯ ಬದುಕಿನ ಅಧ್ಯಯನವಲ್ಲ. ಒಂದು ಸಮುದಾಯದ ಸಮಗ್ರ ಬದುಕಿನ ಅಧ್ಯಯನ. ನೆರಿಕೆಯ ಮರೆಯಲ್ಲಿನ ನೋವುಗಳ ಅಧ್ಯಯನ.

ಹಸಿವು, ಬಡತನ, ಅವಮಾನಗಳನ್ನೆ ಸ್ಥಾಯಿಯಾಗಿಸಿಕೊಂಡ ದಲಿತ ಆತ್ಮಕಥೆಗಳು ಮನುಷ್ಯ ಪ್ರೀತಿಗಾಗಿ ಮಿಡಿದಿವೆ, ಜೀವಪರ ಕಾಳಜಿಗಾಗಿ ಹಂಬಲಿಸಿವೆ. ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ', ಸಿದ್ಧಲಿಂಗಯ್ಯನವರ 'ಊರುಕೇರಿ ಭಾಗ-1, 2', ತುಂಬಾಡಿ ರಾಮಯ್ಯನವರ 'ಮಣೆಗಾರ', ಲಕ್ಷ್ಮಣ್ ಅವರ 'ಸಂಭೋಳಿ', ಹನುಮಂತರಾವ್ ಬಿ.ದೊಡ್ಡಮನಿಯವರ 'ಪಂಚಮ', ಮುಳ್ಳೂರು ನಾಗರಾಜು ಅವರ 'ಮಾಮರದ ಮೇಲೊಂದು ಕೋಗಿಲೆ', ದು.ಸರಸ್ವತಿಯವರ 'ಈಗೇನ್ ಮಾಡೀರಿ', ಎಲ್ಲಪ್ಪ ಕೆ.ಕೆ.ಪುರ ಅವರ 'ಕೇರಿಯಿಂದ ತೇರಿಕೆ'.... ಮುಂತಾದ ಆತ್ಮಕಥೆಗಳು ಸಮಷ್ಠಿ ಪ್ರಜ್ಞೆಯಿಂದ ಕೂಡಿವೆ. ಇವುಗಳಲ್ಲಿ ಊರು ಕೇರಿಯ ನಡುವಿನ ಸಂಘರ್ಷವಿದೆ. ಶೋಷಕರ ವಿರುದ್ಧದ ದನಿ ಇದೆ. ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಹಪಾಹಪಿಯಿದೆ. ಅತಿಮುಖ್ಯವಾಗಿ ದಲಿತ ಆತ್ಮಕಥೆಗಳಲ್ಲಿ ಕಾಣಿಸಿಕೊಳ್ಳುವುದು ಜಾತೀಯತೆ ಮತ್ತು ಅಸ್ಪೃಶ್ಯತೆ. ಇದಕ್ಕೆ ಕಾರಣ ದಲಿತರಿಗೆ ಸಲ್ಲಬೇಕಾಗಿದ್ದ ಸಂಪತ್ತು ಕೇಲವೇ ಕೆಲವು ಮೇಲ್ವರ್ಗದವರಿಗೆ ಸಿಕ್ಕಿ, ಅವರುಗಳ ವಿಕೃತ ದುರ್ಬಳಕೆಗೆ ಬಲಿಯಾಯಿತು. ಮನುಷ್ಯರನ್ನು ವಿಕಾರವಾಗಿ ಜೀವಂತವಾಗಿ ಸುಲಿದು ತಿನ್ನುವ ಈ ಜಾತಿವ್ಯವಸ್ಥೆ ದಲಿತರ ಬದುಕಿನ ಅಸ್ತಿತ್ವವನ್ನೇ ಕಸಿದುಕೊಂಡಿತು. ತತ್ಪರಿಣಾಮವಾಗಿ ದಲಿತರು ವೈದಿಕರ ಕೈಯಲ್ಲಿ ಶತಮಾನಗಳ ಕಾಲ ನರಳಿ ತಮ್ಮ ಮೂಲ ಚಹರೆಯನ್ನೇ ಕಳೆದುಕೊಂಡವು. ಇಂತಹ ಧಾರುಣ ಸ್ಥಿತಿಯನ್ನು ದಲಿತ ಆತ್ಮಕಥೆಗಳು ತಮ್ಮದೇ ಆದ ಶೈಲಿಯಲ್ಲಿ ಹೊರಹಾಕಿವೆ.

**ಮೈಗಂಟಿದ ಚರ್ಮದಂತಿರುವ ಜಾತೀಯತೆ ಮತ್ತು ಅಸ್ಪೃಶ್ಯತೆ :**

ಈ ದೇಶದಲ್ಲಿ ಜಾತಿ ಎನ್ನುವುದು ಭೌತಿಕ ವಸ್ತುವಲ್ಲ. ಅದೊಂದು ಮಾನಸಿಕ ಸ್ಥಿತಿ ಎನ್ನುತ್ತಾರೆ ಅಂಬೇಡ್ಕರ್. ವ್ಯವಸ್ಥಿತ ಮನಸ್ಸುಗಳು ಸೃಷ್ಟಿಮಾಡಿದ ಮಾನಸಿಕ ಕ್ರಿಯೆ ಈ ಜಾತಿ ವ್ಯವಸ್ಥೆ. ಹಾಗಾಗಿ ಇದು ನಿರ್ಮೂಲವಾಗಬೇಕೆಂದರೆ, ಮುಖ್ಯವಾಗಿ ಬದಲಾಗಬೇಕಾಗಿರುವುದು ಮನುಷ್ಯರ ಮನಸ್ಸುಗಳು. ಇದು ಬದಲಾಗುತ್ತಿಲ್ಲ, ಬದಲಾಗಿ ಕಾಲಕಾಲಕ್ಕೆ ಭಿನ್ನ ರೂಪಗಳೊಂದಿಗೆ ಮೈದೆಳೆದು ನಿಲ್ಲುತ್ತಿದೆ. ಇದಕ್ಕೆ ಕಾರಣ ಮನುಷ್ಯನಿಗೆ ಜಾತಿ ಎನ್ನುವುದು ಅಸ್ತಿತ್ವದ ಪ್ರಶ್ನೆಯಾಗಿರುವುದು ಮತ್ತು ಮೇಲ್ಜಾತಿಗಳಿಗೆ ಗೌರವದ, ಪ್ರತಿಷ್ಠೆಯ ಪ್ರಶ್ನೆಯಾಗಿರುವುದು. ಸಂಪತ್ತಿನ ಬಹುತೇಕ ಭಾಗ ಈ ಮೇಲ್ಜಾತಿಗಳ ಕೈಯಲ್ಲಿದ್ದುದರಿಂದ, ಅವರು ಜಾತಿ ಎನ್ನುವುದನ್ನು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡಿದ್ದರಿಂದ ಈ ಜಾತಿ ವ್ಯವಸ್ಥೆ ಮತ್ತಷ್ಟು ಬೇರೂರಿತು. ಆ ಬೇರನ್ನು ಕಿತ್ತುವ ಧೈರ್ಯವಾಗಲಿ, ಸಾಮರ್ಥ್ಯವಾಗಲಿ ಕೆಳಜಾತಿಗಳವರಲ್ಲಿ ಇಲ್ಲದೆ ಇದ್ದುದರಿಂದ ಅದು ಸುಭದ್ರವಾಗಿಯೇ ಬಿಟ್ಟಿತು. ದಲಿತ ಆತ್ಮಕಥನಕಾರರು ಇಂತಹ ಜಾತೀಯತೆ ಮತ್ತು ಅದರ ಹೆಸರಿನಲ್ಲಿ ಬೇರೂರಿರುವ ಅಸ್ಪೃಶ್ಯತೆಯನ್ನು ತಾವು ಕಂಡ ಅನೇಕ ಘಟನಾವಳಿಗಳ ಹಿನ್ನೆಲೆಯಲ್ಲಿ ದಾಖಲಿಸಿದ್ದಾರೆ.

ಈ ದೇಶದ ಶ್ರೇಣೀಕೃತ ಜಾತಿ ವ್ಯವಸ್ಥೆಯು ದಮನಿತನೊಬ್ಬ ಅಕ್ಷರವಂತನಾಗುವುದನ್ನು ಸಹಿಸುವುದಿಲ್ಲ. ಅರವಿಂದ ಮಾಲಗತ್ತಿಯವರ ಹೆಸರನ್ನು ಕತ್ತಿ ಎಂದು ಬರೆದಾಗ ನಡೆದ ಘಟನೆಯೊಂದನ್ನು 'ಗೌರ್ಮೆಂಟ್ ಬ್ರಾಹ್ಮಣ'ದಲ್ಲಿ ಹೇಳಿದ್ದಾರೆ. ಮಾಲಗತ್ತಿಯವರನ್ನು ಮಾಲಕತ್ತಿ ಎಂದು ಬರೆಯಲಾಗಿತ್ತು. ಅದನ್ನು ತಿದ್ದಲು ಹೋಗಿದ್ದ ಮಾಲಗತ್ತಿಯವರು ಸವರ್ಣೀಯ ಉಪಾಧ್ಯಾಯರಿಂದ ಅವಮಾನಕ್ಕೊಳಗಾದ ಬಗೆ ಹೀಗಿದೆ- "ಕತ್ತಿ ಅಂತ ಬರದ್ರು ಏನಾಯ್ತು? ಗತ್ತಿ ಅಂತ ಮಾಡಾಕೆ ಹೋಗಿದ್ಯಾ? ಮಗಾ ಬರ‍್ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ... ಕತ್ತಿ... ಕತ್ತಿನೇ... ಕತ್ತೆಲ್ಲರ ಕುದುರ‍್ಯಾಕ್ಕದೇನಾ?... ಕತ್ತಿಗೆಲ್ಲ ಯಾಕೆ ಬೇಕು ಹತ್ತಿಕಾಲ ನೀರ?.."[1] ಇದು ಕೇವಲ ಮಾಲಗತ್ತಿಯವರಿಗೆ ಅಷ್ಟೇ ಸೀಮಿತವಲ್ಲ. ಎಷ್ಟೋ ದಲಿತ ವಿದ್ಯಾರ್ಥಿಗಳು ಹೀಗೆ ಅನೇಕ ಅವಮಾನಗಳನ್ನು ಕಲಿಕೆಯ ಸಂದರ್ಭದಲ್ಲಿ ಅನುಭವಿಸಿದ್ದಾರೆ. ಅಕ್ಷರ ಕಲಿತರೂ ವ್ಯವಸ್ಥೆಯ ಚೌಕಟ್ಟಿನೊಳಗೆ ಬದುಕುವುದನ್ನು ಬಿಟ್ಟು ಬೇರೇನೂ ಮಾಡುವಂತಿಲ್ಲ. ಬಹುಶಃ ಇಂತಹ ಅವಮಾನಗಳೇ ಮಾಲಗತ್ತಿಯಂಥವರಿಗೆ ಮೆಟ್ಟಿಲುಗಳಾದವು.

ಕೆಳಜಾತಿಯವರು ಎಂಬ ಕಾರಣಕ್ಕೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಲು ತಡವರಿಸಿದಾಗ ದು.ಸರಸ್ವತಿಯವರು ಎದುರಿಸಿದ ಘಟನೆಯೊಂದು ಹೀಗಿದೆ- "ತಲೆ ಒಳ್ಗೆ ಸೆಗ್ಣಿ ತುಂಬಿದೆ. ಒಂದ್ ಸಣ್ ಪ್ರಶ್ನೆಗೆ ಉತ್ರ ಕೊಡೋಕೆ ಬರಲ್ಲ. ಎದೆ ಸೀಳಿದ್ರೆ ನಾಕ್ ಅಕ್ಷರ ಇಲ್ಲ ಜಾತಿ ಹೆಸ್ರು ಹೇಳ್ಕೊಂಡು ಬಂದ್ ಬಿಡ್ತಿರ ಶಾಲೆ ಮರ್ಯಾದೆ ತೆಗ್ಯೋಕೆ".[2] ಒಬ್ಬ ವಿದ್ಯಾರ್ಥಿ/ನಿಯ ತಪ್ಪು ಕಾಣಿಸಿಕೊಳ್ಳುವುದು ವೈಯುಕ್ತಿಕ ನೆಲೆಯಲ್ಲಿ. ಆದರೆ ಅದನ್ನು ಜಾತಿಗೆ ಹೋಲಿಸಿ ಅವಮಾನಿಸುವುದು ನಮ್ಮಲ್ಲಿ ಅಭ್ಯಾಸವಾಗಿ ಬಿಟ್ಟಿದೆ. ಅದಕ್ಕೆ ಕಾರಣ ದಲಿತರು ವಿದ್ಯೆ ಕಲಿಯಲಿಕ್ಕೆ ಅನರ್ಹರು ಎನ್ನುವ ಸಾಂಪ್ರದಾಯಿಕ ನಂಬಿಕೆ.

ಎನ್.ಕೆ.ಹನುಮಂತಯ್ಯನವರು ದಾಖಲಿಸಿದ ಘಟನೆ ಅಸ್ಪೃಶ್ಯತೆ ಆಚರಣೆಯ ವಿಧಾನದ ಅನೇಕ ಆಯಾಮಗಳನ್ನು ನಮ್ಮ ಮುಂದಿಡುತ್ತದೆ. ಭಿಕ್ಷುಕಿಯೊಬ್ಬಳು ದಲಿತರ ಮನೆಗೆ ಬಂದು ಭಿಕ್ಷೆ ಬೇಡುವಾಗಿನ ಸಂದರ್ಭವದು. ಭಿಕ್ಷೆಗೆ ಬಂದ ಮುದುಕಿಗೆ ಹನುಮಂತಯ್ಯನವರು "ಅಮ್ಮ ಬಿಸಿ ರೊಟ್ಟಿಯನ್ನು ಕೊಡುತ್ತೇನೆ ತೆಗೆದುಕೊಳ್ತೀಯಾ? ಎಂದೆ. ಅದಕ್ಕೆ ಆ ಮುದುಕಿ ಹೆದರಿದವಳಂತೆ 'ಅಯ್ಯೋ ಶಿವನೆ ಎಲ್ಲಾದರೂ ಉಂಟೆ? ಮೇಲೆ ಹರಿಯೋ ನೀರು ಮೇಲೆ ಹರಿಯಬೇಕು. ಕೆಳಗೆ ಹರಿಯುವ ನೀರು ಕೆಳಗೆ ಹರಿಯಬೇಕು. ರೊಟ್ಟಿಗಿಟ್ಟಿ ಬೇಡ. ಅಕ್ಕಿ, ರಾಗಿ ಇದ್ರೆ ಕೊಡಪ್ಪ' ಎಂದಳು"[3]. ಇದೇ ವ್ಯವಸ್ಥಿತ ಸಮಾಜ ರೂಪಿಸಿದ ವಿಚಿತ್ರ ಆಚರಣೆ. ಈ ಆಚರಣೆ ಒಂದೊಂದು ಸಲ ಎಂತಹ ವಿಕೃತ ರೂಪವನ್ನು ಪಡೆದುಕೊಳ್ಳುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ದಲಿತರ

[1] ಅರವಿಂದ ಮಾಲಗತ್ತಿ : ಗೌರ್ಮೆಂಟ್ ಬ್ರಾಹ್ಮಣ, ಪುಟ.9

[2] ದು.ಸರಸ್ವತಿ : ಈಗೇನ್ ಮಾಡೀರಿ?, ಪುಟ. 13

[3] ಕೋಟಿಗಾನಹಳ್ಳಿ ರಾಮಯ್ಯ(ಸಂ): ತಲಪರಿಗೆ, ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು, ಪುಟ. 427

ಮನೆಯಲ್ಲಿ ಪಡೆದ ಅಕ್ಕಿ, ರಾಗಿಗೆ ಅಸ್ಪೃಶ್ಯತೆಯ ಸೋಂಕು ಇಲ್ಲದೆ ಇದ್ದಾಗ, ಅವರು ಮಾಡಿದ ಅಡುಗೆಗೇಕೆ? ಎನ್ನುವ ಪ್ರಶ್ನೆ ಶತಶತಮಾನಗಳಿಂದ ಕೇಳದೇ ಇದ್ದುದು. ಇದನ್ನು ಕೇಳಲಿಕ್ಕೆ ದಲಿತರಿಗೆ ಸಾಧ್ಯವಾದದ್ದು ಅಕ್ಷರ ಕಲಿತಾಗ ಮಾತ್ರ ಎನ್ನುವುದನ್ನು ನಾವಿಲ್ಲಿ ಮನಗಾಣಬಹುದು. ಅಕ್ಕಿ, ರಾಗಿಗಳು ಪ್ರಕೃತಿ ದತ್ತವಾದಂತೆ ದಲಿತರು ಸಹ ಇತರರಂತೆ ಪ್ರಕೃತಿ ದತ್ತವಾಗಿಯೇ ಹುಟ್ಟಿದ್ದಾರಲ್ಲವೆ? ಅವರಿಗೇಕೆ ಈ ಶೋಷಣೆಯೆಂಬ ಬಲೆಯನ್ನು ಹಾಕಲಾಗಿದೆ. ಅದರಲ್ಲಿ ಬಂಧಿಸಲಾಗಿದೆ? ಇಂತಹ ಪ್ರಶ್ನೆಗಳು ಹುಟ್ಟಿಕೊಳ್ಳಲಿಕ್ಕೆ ಅವರು ಕಾಯಬೇಕಾದದ್ದು ಎಷ್ಟು ನೂರು ವರ್ಷಗಳು ಎನ್ನುವುದನ್ನು ನಾವಿಲ್ಲಿ ಯೋಚಿಸಬೇಕಾಗಿದೆ. ಅದಕ್ಕಾಗಿಯೇ ಅಂಬೇಡ್ಕರ್ ದಲಿತರಿಗೆ ಮೊದಲು ಶಿಕ್ಷಣದ ಅಗತ್ಯವಿದೆ ಎನ್ನುವುದನ್ನು ಒತ್ತಿ ಹೇಳಿದರು.

ಇನ್ನೊಂದು ವಿಚಿತ್ರವೆನಿಸುವ ಅಸ್ಪೃಶ್ಯತೆಗೆ ಸಂಬಂಧಿಸಿದ ಘಟನೆ ತುಂಬಾಡಿ ರಾಮಯ್ಯನವರ 'ಮಣೆಗಾರ'ದಲ್ಲಿದೆ. ಸಮಾನ ಶೋಷಣೆಗೆ, ಸಮಾನ ತುಳಿತಕ್ಕೆ ಒಳಗಾದ ದಲಿತರಲ್ಲಿಯೇ ನಡೆಯುವ ಪ್ರಸಂಗವೊಂದು ಹೀಗಿದೆ. "ನಮ್ಮೊಂದಿಗಿನ ಹೊಲೆಯರ ನಡವಳಿಕೆ ಇನ್ನೂ ವಿಚಿತ್ರವಾಗಿತ್ತು. ನಮ್ಮ ಹಳ್ಳಿಯಲ್ಲಿ ಮಣೆಗಾರರಿಗೆ ಒಂದು ಬಾವಿ, ಹೊಲೆಯರಿಗೆ ಒಂದು ಬಾವಿ ಇತ್ತು. ಅವರ ಬಾವಿಯಲ್ಲಿ ನಾವಾಗಲೀ ಅಥವಾ ನಮ್ಮ ಬಾವಿಯಲ್ಲಿ ಹೊಲೆಯರಾಗಲೀ ಎಂದೂ ನೀರು ಸೇದುವಂತಿರಲಿಲ್ಲ! ಹೊಲೆಯರ ಹೆಂಗಸರು ನಮ್ಮ ಹಟ್ಟಿಗೆ ಕೂಲಿಯಾಳುಗಳನ್ನು ಕರೆಯಲು ಬಂದಾಗ, ಕೆಂಡದ ಮೇಲೆ ನಡೆದು ಬರುವಂತೆ ಬಂದು ಹೋಗುತ್ತಿದ್ದರು. ತಮ್ಮ ಹಟ್ಟಿಗೆ ಹೋದ ಕೂಡಲೆ ಸಗಣಿ-ಗಂಜಲ ತುಳಿದು ತಮ್ಮ ಕಾಲುಗಳನ್ನು ಪಾವನವಾಗಿಸಿಕೊಳ್ಳುತ್ತಿದ್ದರು."[4] ಇದು ಮೇಲ್ವರ್ಗದವರು ನಿರ್ಮಿಸಿದ ವ್ಯವಸ್ಥಿತ ಸಂಚು ಎನ್ನುವುದನ್ನು ದಲಿತರು ಅರಿತುಕೊಳ್ಳಲಿಲ್ಲ. ಇದನ್ನೇ ವ್ಯವಸ್ಥಿತ ಶ್ರೇಣೀಕೃತ ವ್ಯವಸ್ಥೆ ಎನ್ನುವುದು. ಜಾತಿಯೊಳಗೆಯೇ ಭಿನ್ನತೆಯನ್ನು ಸೃಷ್ಟಿಸಿ, ಒಂದಿಷ್ಟು ಬದಲಾವಣೆಗಳನ್ನು ಮಾಡಿ ಅವರನ್ನು ಏಕಾಂಗಿಗಳನ್ನಾಗಿಸಿ ತಮ್ಮ ಕಾಂಕ್ಷೆಗಳನ್ನು ಸಾಧಿಸುವುದೇ ಇಲ್ಲಿಯ ಮುಖ್ಯ ಉದ್ದೇಶ. ಆದರೆ ಈ ಒಳಸಂಚು ಶೋಷಿತರಿಗೆ ಅರ್ಥವಾಗಲಿಲ್ಲ. ಹೊಲೆಯರೇ ನೀವು ಮಾದಿಗರಿಗಿಂತ ಸ್ವಲ್ಪ ಮೇಲ್‌ಸ್ತರದವರು ಎಂದೊಡನೆ ಇವರು ಹುಬ್ಬಿ ಹೋದರು. ತಮ್ಮನ್ನು ಮಾದಿಗರೊಂದಿಗೆ ಹೋಲಿಸಿಕೊಂಡರೇ ವಿನಃ, ತಮಗಿಂತ ಮೇಲೆ ಇರುವವರೊಂದಿಗೆ ಹೋಲಿಸಿಕೊಳ್ಳಲಿಲ್ಲ. ಅದು ತಮ್ಮ ಪೂರ್ವಜನ್ಮದ ಫಲವೆಂದು ಭಾವಿಸಿ ಸುಮ್ಮನಾದರು.

ಹನುಮಂತರಾವ್ ಬಿ.ದೊಡ್ಡಮನಿ ಅವರ 'ಪಂಚಮ' ಆತ್ಮಕಥೆಯಲ್ಲಿ ಚಿತ್ರಿಸಿರುವ ಅಸ್ಪೃಶ್ಯತೆಗೆ ಸಂಬಂಧಿಸಿದ ಅನೇಕ ಅಂಶಗಳು ನಮ್ಮನ್ನು ಬೆರಗುಗೊಳಿಸುತ್ತವೆ ಮತ್ತು ಚಿಂತನೆಗೆ ಹಚ್ಚುತ್ತವೆ. ಕುಡಿಯುವ ನೀರಿನ ವಿಷಯದಲ್ಲಿ ನಡೆಯುವ ಅಸ್ಪೃಶ್ಯತೆ, ಅದರಿಂದ ದಲಿತರು ಅನುಭವಿಸಿದ ಸಂಕಷ್ಟಗಳು, ಅವಮಾನಗಳು ಹೇಯವಾದವು. ಆದರೆ ಈ ಅವಮಾನವನ್ನು ಸಹಿಸಿಕೊಂಡೇ ಬದುಕುವ ದಲಿತರಿಗೆ ವ್ಯವಸ್ಥೆಯ ವಿರುದ್ಧ ದನಿ ಎತ್ತಲಾರದ ಅಸಹಾಯಕತೆ ಇರುವುದನ್ನು ಅವರು ತಮ್ಮ ಆತ್ಮಕಥೆಯಲ್ಲಿ ಅನೇಕ ನಿದರ್ಶಗಳ ಮೂಲಕ ತಿಳಿಸಿದ್ದಾರೆ.

ಜಾತೀಯತೆ ಮತ್ತು ಅಸ್ಪೃಶ್ಯತೆಗೆ ಸಂಬಂಧಿಸಿದ ಅನೇಕ ನಿದರ್ಶನಗಳು ಕನ್ನಡದ ದಲಿತ ಆತ್ಮಕಥೆಗಳಲ್ಲಿ ನಮಗೆ ಸಿಗುತ್ತವೆ. ಈ ನಿದರ್ಶನಗಳು ಕೇವಲ ಆಯಾ ವ್ಯಕ್ತಿಗಳಿಗೆ ಸಂಬಂಧಿಸಿದವುಗಳಲ್ಲ. ಅವು ಆಯಾ ಸಮುದಾಯಗಳಿಗೆ ಸಂಬಂಧಿಸಿದವುಗಳು. ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಭ್ರಷ್ಟಾಚಾರಗಳು. ದೇಶ ಸ್ವಾತಂತ್ರ್ಯಗೊಂಡು ಇಷ್ಟು ವರ್ಷಗಳಾದರೂ ಇದರ ಆಚರಣೆ ಇನ್ನೂ ಇದೆ. ಇದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಒಂದು ರೀತಿಯಲ್ಲಿ ಇಂತಹ ಆಚರಣೆಗಳು ಮನುಷ್ಯ ಸಂಬಂಧಗಳನ್ನು ನಾಶಗೊಳಿಸುತ್ತವೆ. ಮೂಲಭೂತವಾದಿತನದಿಂದ ಹೊರಬಂದಾಗಲೇ ಜಾತೀಯತೆ ಮತ್ತು ಅಸ್ಪೃಶ್ಯತೆ ನಮ್ಮಿಂದ, ನಮ್ಮ ಸಮಾಜದಿಂದ ಹೊರಹೋಗಲು ಸಾಧ್ಯ. ಈ ಜಾತೀಯತೆ ಎನ್ನುವ ಭೂತ ಅನೇಕ ವಿಕೃತ ಮನಸ್ಸುಗಳನ್ನು ಸೃಷ್ಟಿಸಿದೆ. ಆ ವಿಕೃತ ಮನಸ್ಸುಗಳೇ ಅನೇಕ ವಿಕೃತ ಆಚರಣೆಗಳಿಗೆ ನಾಂದಿ ಹಾಡಿವೆ. ಈ ಆಚರಣೆಗಳ ಮುಖೇನ ಅಸಹಾಯಕರನ್ನು, ದುರ್ಬಲರನ್ನು ಗುರಿಯಾಗಿಸಿಕೊಂಡು, ಅವರನ್ನು ತಮ್ಮ ಅನುಕೂಲಗಳಿಗೆ ತಕ್ಕಂತೆ ಬಳಸಿಕೊಂಡರು. ಈ ರೀತಿಯ ಅನೇಕ ವಿಚಾರಗಳು ದಲಿತ ಆತ್ಮಕಥೆಗಳಲ್ಲಿವೆ. ಇದು ಕೇವಲ ದಲಿತ ದೌರ್ಬಲ್ಯವಲ್ಲ, ಶೋಷಕರ ಭಂಡತನವೂ ಹೌದು ಎನ್ನುವುದನ್ನು ನಾವು ಮರೆಯುವಂತಿಲ್ಲ.

ಇಂದು ದೇಶ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಎಷ್ಟೇ ಮುಂದುವರೆದರೂ ಇಲ್ಲಿನ ಜಾತಿ ವ್ಯವಸ್ಥೆ ಮಾತ್ರ ಹಾಗೆಯೇ ಇದೆ. ಇದೊಂದು ಸಾಮಾಜಿಕ ವೈರಸ್ಸು. ಆ ವೈರಸ್ಸನ್ನು ಕಿತ್ತೊಗೆಯುವ ಸಮರ್ಥ ಆ್ಯಂಟಿವೈರಸ್ ಇನ್ನೂ ತಯಾರಾಗಿಲ್ಲ. ಎಂತಹ ಆ್ಯಂಟಿವೈರಸ್ ಬಂದರೂ ವೈರಸ್ ಮಾತ್ರ ಬೇರೆ ಬೇರೆ ರೀತಿಯಲ್ಲಿ ಅಂಟಿಕೊಳ್ಳುತ್ತಿರುವುದರಿಂದ ಅದು ಕಷ್ಟ ಸಾಧ್ಯದ ಕೆಲಸವಾಗಿದೆ. ಹಾಗಾಗಿ ದಲಿತರು ದಲಿತರಾಗಿಯೇ ಇದ್ದಾರೆ ಎಂದರೆ ಅದು ದಲಿತರ ತಪ್ಪಲ್ಲ. ದಲಿತರನ್ನು ಸವರ್ಣೀಯರು ನೋಡುವ ವ್ಯಕ್ತಿತ್ವದ ತಪ್ಪು. ಈ ಬಗೆಯ ವ್ಯಕ್ತಿತ್ವ ರೂಪುಗೊಳ್ಳದೇ ಇದ್ದರೆ ಅದು ಮನುಷ್ಯನ ವಿಕಾಸಕ್ಕೆ ಅಪಾಯಕಾರಿ.

**ಕಿತ್ತು ತಿನ್ನುವ ಬಡತನ ಹಾಗೂ ತೃಪ್ತಿಗೊಳ್ಳದ ಹಸಿವು:**

ದಲಿತರ ಮುಖ್ಯ ಲಕ್ಷಣ ಬಡತನ ಮತ್ತು ಹಸಿವು. ಆ ಬಡತನವೇ ಅವರನ್ನು ಅಷ್ಟೊಂದು ಹೀನವಾದ ಬದುಕನ್ನು ಬದುಕುವಂತೆ ಮಾಡಿತು. ದಲಿತರು ಬಡತನದಿಂದ ಮುಕ್ತರಾಗಿ ನೆಮ್ಮದಿಯ ಬದುಕು ಬದುಕಲಿಲ್ಲ. ಹೊಟ್ಟೆ ತುಂಬ ಉಂಡು ರಟ್ಟೆಯನ್ನು ಗಟ್ಟಿಯಾಗಿಸಿಕೊಳ್ಳಲಿಲ್ಲ. ಹಾಗಾಗಿಯೇ ಇವೆರಡು ಅವರ ದೌರ್ಬಲ್ಯಗಳಾದವು. ಈ ದೌರ್ಬಲ್ಯಗಳನ್ನೇ ಉಳ್ಳವರು, ಉಂಡವರು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡರು. ಈ ಬಗೆಯ ಬಳಸಿಕೊಳ್ಳುವಿಕೆಯಲ್ಲಿಯೆ ದಲಿತರು ತಮ್ಮ ಬದುಕನ್ನು ಬೇರೆಯವರ ಕೈಗಿತ್ತು ಕೈಕಟ್ಟಿ ಕುಳಿತುಕೊಂಡರು. ತನ್ನ ಬದುಕನ್ನು ಪರರಿಗಿತ್ತು, ಮತ್ತೆ ಅದನ್ನು ಪಡೆದುಕೊಳ್ಳಲಿಕ್ಕೆ ನಾನಾ ರೀತಿಯ ಹೋರಾಟಗಳನ್ನು ಅವರು ಮಾಡಬೇಕಾಗಿ ಬಂದುದು ಈಗ ಇತಿಹಾಸ. ಆ ಇತಿಹಾಸದ ಕರಾಳತೆಯೆಡೆಗೆ ಮತ್ತೆ ನಮ್ಮನ್ನು ಕೊಂಡುಯ್ಯುತ್ತವೆ ಕನ್ನಡದ ದಲಿತ ಆತ್ಮಕಥೆಗಳು.

ದಲಿತರ ಬದುಕಿನ ಬುನಾದಿಯನ್ನೇ ಅಲುಗಾಡಿಸಿದ್ದು, ಅವರ ಅಸ್ತಿತ್ವವನ್ನೇ ಕಂಗಾಲಾಗಿಸಿದ್ದು ಬಡತನ ಮತ್ತು ಹಸಿವು. ಹಿಡಿ ಅನ್ನ ತಿಂದು ಇಡೀ ದಿನ, ಗುಟುಕು ಗಂಜಿ ಕುಡಿದು ದಿನಗಟ್ಟಲೇ ಬದುಕಿದ ದಲಿತ ಕುಟುಂಬಗಳು ಅದೆಷ್ಟೋ. ಇದಕ್ಕೆಲ್ಲಾ ಮುಖ್ಯ ಕಾರಣ ಸಂಪತ್ತಿನ ಅಸಮಾನ ಹಂಚಿಕೆ. ಸಂಪತ್ತೆನ್ನುವುದು ಕೇವಲ ಕೆಲವು ಪ್ರತಿಶತರಲ್ಲಿ ಮಾತ್ರ ಕೇಂದ್ರೀಕೃತವಾದಾಗ ಈ ಬಗೆಯ ಸಮಸ್ಯೆಗಳು ತಲೆದೋರುತ್ತವೆ. ಮನುಷ್ಯನ ಏನೆಲ್ಲವುಗಳನ್ನೂ ಕೇವಲ ಬಡತನವೊಂದೇ ನಾಶಗೊಳಿಸಬಲ್ಲದು. ಅದಕ್ಕೆ ಈ ದೇಶದ ಇತಿಹಾಸವೇ ಸಾಕ್ಷಿ. ಆದರೆ ಅದರಿಂದ ಸಿಡಿದೆದ್ದು ಬರುವ ಶಕ್ತಿಯನ್ನು ಅವರೇ ಸೃಷ್ಟಿಸಿಕೊಂಡಾಗ ಮಾತ್ರ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬಲ್ಲರು ಎನ್ನುವುದನ್ನು ಅನೇಕ ಆತ್ಮಕಥನಕಾರರ ಬದುಕಿನ ಹಿನ್ನೆಲೆಯಲ್ಲಿ ಅರಿಯಬಹುದಾಗಿದೆ.

[4] ತುಂಬಾಡಿ ರಾಮಯ್ಯ: ಮಣೆಗಾರ, ಪುಟ.14

‘ಊರುಕೇರಿ’ಯಲ್ಲಿ ದಾಖಲಿಸಿಲಾಗಿರುವ ಘಟನೆಯಿಂದಲೇ ದಲಿತರ ಹಸಿವಿನ ಪರಿಯನ್ನು ಅರಿಯೋಣ. “ಒಂದು ಸಲ ಮಂಚನಬೆಲೆಗೆ ಬೇರೆ ಊರಿನ ಎಮ್ಮೆ ತಪ್ಪಿಸಿಕೊಂಡು ಬಂತು. ಕತ್ತಲೆಯೂ ಆಗಿತ್ತು. ಊರಿನ ದಲಿತರಲ್ಲಿ ಮೂರು ನಾಲ್ಕು ಜನ ಗಟ್ಟಿಯಾಗಿದ್ದವರು ಅದನ್ನು ಹಿಡಿದರು. ಊರ ಹಿಂದಿನ ಬಂಡೆಯ ಬಳಿಗೆ ಸಾಗಿಸಿ, ಕೊಯ್ದು ಪಾಲು ಹಾಕಿಕೊಂಡು ರಾತ್ರಿಯೆಲ್ಲಾ ಹಬ್ಬ ಮಾಡಿದರು. ಎಮ್ಮೆಯನ್ನು ಕೊಯ್ದಾಗಿನ ರಕ್ತ ಬಂಡೆಯ ಮೇಲೆಲ್ಲಾ ಚೆಲ್ಲಿ ಬಂಡೆ ಕೆಂಪಾಗಿತ್ತು. ಅದು ಕಳ್ಳತನದ ಗುರುತಿನಿಂದ ಕಾಣುತ್ತಿತ್ತು.”[5] ದಲಿತರು ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಕಂಡುಕೊಂಡ ಮಾರ್ಗಗಳು ಅನೇಕ. ಅಂತಹವುಗಳಲ್ಲಿ ಇದೂ ಒಂದು. ಇಲ್ಲಿ ಮುಖ್ಯವಾಗಿ ಕಾಡುವಂತಹದ್ದು ಆಹಾರದ ಸಮಸ್ಯೆ. ಮೇಲ್ವರ್ಗದವರ ಕಣ್ಣಿಗೆ ಇದು ಕಳ್ಳತನ ಮತ್ತು ಕೀಳುತನ ಎರಡನ್ನೂ ಸೂಚಿಸುತ್ತದೆ. ಆದರೆ ದಲಿತರ ದೃಷ್ಟಿಯಲ್ಲಿ ಅದು ತಮ್ಮ ಆಹಾರದ ಸಮಸ್ಯೆಯಾಗಿ ಕಾಣುತ್ತದೆ. ಉಳಿದ ಅನ್ನವನ್ನೋ, ಹಳಸಿದ ಅನ್ನವನ್ನೋ, ಸತ್ತ ದನದ ಮಾಂಸವನ್ನೋ ತಿಂದವರಿಗೆ ಜೀವಂತ ದನದ ಮಾಂಸ ದೊರೆತರೆ ಅದೇ ಹಬ್ಬ. ಆತ್ಮಕಥನಕಾರರ ಹೇಳಿಕೆಯಂತೆ ಈ ಹಬ್ಬ ಅವರಿಗೆ ದೊರೆಯುವುದು ಅಪರೂಪಕ್ಕೆ. ಇಂತಹ ಅಪರೂಪದ ಅವಕಾಶವನ್ನು ಅವರು ಕಳೆದುಕೊಳ್ಳಲಿಲ್ಲ. ಅದರ ಪಡೆಯುವಿಕೆಯಲ್ಲಿಯೇ ಅವರ ಜಾಣತನವಿದೆ ಮತ್ತು ತಮ್ಮ ಉಳಿವಿನ ಪ್ರಶ್ನೆಯಿದೆ.

ಹಸಿವಿನ ತೀವ್ರತೆ ಮನುಷ್ಯನನ್ನು ಯಾವ ಮಟ್ಟಕ್ಕಾದರೂ ಇಳಿಸುತ್ತದೆ. ತಮ್ಮ ಹಸಿವನ್ನು ನೀಗಿಸಿಕೊಳ್ಳುವುದಕ್ಕಾಗಿಯೇ ದಲಿತರು ನಾಗರೀಕ ಸಮಾಜ ಅನಾಗರಿಕವೆಂದ ಕೆಲಸಕ್ಕೆ ಕೈ ಹಾಕಿತು. ಅದು ಅವರ ದೃಷ್ಟಿಯಲ್ಲಿ ಅನಾಗರೀಕವಲ್ಲ. ಬದುಕುವುದಕ್ಕೆ ಅವರು ಕಂಡುಕೊಂಡ ಮಾರ್ಗವಷ್ಟೆ. ಅದೇ ಅವರ ಆಹಾರದ ಪದ್ಧತಿ. “ಅಪ್ಪನ ಹಿಂದೆ ಎತ್ತು, ಎಮ್ಮೆ, ಕರ ಕೊಯ್ಯಲು, ಸತ್ತ ದನಗಳನ್ನು ಹೊರುವಾಗ ನಾನವುಗಳ ಕಾಲು, ಬಾಲ, ಕೊಂಬು ಹಿಡಿಯುವುದೆಂದರೆ ಇನ್ನೂ ಖುಷಿ ಪಡುತ್ತಿದ್ದೆ. ದನದ ರಕ್ತವನ್ನು ಮಣ್ಣಿನ ಗಡಿಗೆಯಲ್ಲಿ ಹಿಡಿದು ಅದರಲ್ಲಿ ಉಪ್ಪು ಖಾರ ಉಳ್ಳಾಗಡ್ಡೆ ಹಾಕಿ ಬೇಯಿಸಲು ಸಣ್ಣ ಪುಟ್ಟ ಕಟ್ಟಿಗೆ ಪುಳ್ಳೆ ಆರಿಸಿ ತರುತ್ತಿದ್ದೆ. ಬೇಯಿಸಿದ ರಕ್ತವನ್ನು ‘ಪಾಲು’ ಮಾಡಿ ತಿನ್ನುವುದರಲ್ಲಿದ್ದ ಮಜಾ ಇನ್ಯಾವ ತಿಂಡಿ ತಿನಿಸಿನಲ್ಲಿರಲಿಲ್ಲ. ನಮ್ಮ ಪಾಲನ್ನು ಸಳ್ಳೆ ಪುಟ್ಟಿಯಲ್ಲಿ ಹಾಕಿಕೊಂಡು, ತಲೆಯ ಮೇಲೆ ನಾ ಹೊತ್ತು ನಡೆದರೆ, ಅಪ್ಪ ನನ್ನ ಹಿಂದೆ ಹಿಂದೆನೇ ತಂಗಡಿ ಸೊಪ್ಪಿನಿಂದ ರಣಹದ್ದು, ಕಾಗೆ ಹಿಂಡನ್ನು ಓಡಿಸುತ್ತಿದ್ದ. ಹೀಗೆ ಹೊತ್ತು ತಂದ ಸಳ್ಳೆಯನ್ನು ಅಮ್ಮ ಕುಡುಗೋಲಿನಿಂದ ಉದ್ದೂದ್ದವಾಗಿ ಕೊಯ್ದು ‘ಆರ್ಬಡ್ಡಿ’ ತುಂಡು ತುಂಡು ಮಾಡಿ, ಚಪ್ಪರದ ನೆರಿಕೆಗೆ, ಮನೆಯ ಮುಂದಿನ ಬೇಲಿಯ ಮೇಲೆ, ನಿಲುವುಗಣಿಗೆಗೆ ರಿಬ್ಬನ್ನು ಪೀಪಿಗಳಂತೆ ನೇತು ಹಾಕಿ, ಆಗ್ಗೆ ತಿನ್ನಲು ಒಳ್ಳೊಳ್ಳೆ ಹದವಾದ ‘ಬಿಚ್ಚಿ’ ತುಂಡು, ಈರಿ, ಗುಂಡಿಗೆ, ಲಲ್ಡಿ, ಪಚ್ಚಿ ಇವುಗಳಿಗೆ ಉಪ್ಪು ಹಾಕಿ ಬೇಯಿಸಿ, ಸಪ್ಪೆ ಬಾಡೆಂದು ಕೊಡುತ್ತಿದ್ದಳು.”[6] ಇದು ದಲಿತರ ಆಹಾರ ಸಂಸ್ಕೃತಿಗೆ ಒಂದು ನಿದರ್ಶನ. ತಮ್ಮ ಪಾಲಿಗೆ ಬಂದ ಮಾಂಸದ ತುಂಡನ್ನು ತಲೆಯ ಮೇಲೆ ಹೊತ್ತು ತರುವುದೆಂದರೆ ಅದು ಮೆರವಣಿಗೆಯಲ್ಲಿ ಬಂದಂತಹ ಆನಂದ. ಇಂತಹವುಗಳೇ ಅಲ್ಲವೇ ಅವರುಗಳಿಗೆ ಉಚಿತವಾಗಿ ದಕ್ಕುವವು.

ದನ ಸತ್ತ ಮೇಲೆ ಅದು ಊರ ದಲಿತನ ಪಾಲಾಗುತ್ತಿತ್ತು. ಇದನ್ನೇ ವಿ.ಮುನಿವೆಂಕಟಪ್ಪನವರು ಹೀಗೆ ಚಿತ್ರಿಸಿದ್ದಾರೆ. “ಊರಿನಲ್ಲಿ ದನ ಸತ್ತ ಮನೆಯವರು ದಲಿತ ಕೇರಿಗೆ ತಿಳಿಸುತ್ತಿದ್ದರು. ಕಟ್ಟಿಗೆಗೆ ದನದ ಕಾಲುಗಳನ್ನು ಕಟ್ಟಿ ತಲೆಕೆಳಗೆ ಮಾಡಿ, ಇಬ್ಬರು ಮುಂದೆ ಇಬ್ಬರು ಹಿಂದೆ ಸತ್ತ ದನವನ್ನು ಹೊತ್ತು ಊರ ಹೊರಗಿನ ಹೊಂಗೆ ತೋಪಿನಲ್ಲಿಗೆ ಹೊಯ್ಯುತ್ತಿದ್ದರು. ಚರ್ಮ ಸುಲಿದು ಉಳಿದ ವಿವಿಧ ಭಾಗಗಳನ್ನು ಬೇರ್ಪಡಿಸುತ್ತಿದ್ದರು. ದಲಿತ ಕೇರಿಯ ಹುಡುಗರು, ಮುದುಕರು, ಹೆಂಗಸರು ಮುತ್ತಿಕೊಳ್ಳುತ್ತಿದ್ದರು. ದನದ ಮಾಂಸವನ್ನು ಕೇರಿಯ ಮನೆಗೊಂದು ಪಾಲು ಬರುವಂತೆ ಭಾಗ ಮಾಡುತ್ತಿದ್ದರು. ಪಾಲು ನೀಡದಿದ್ದರೆ ಜಗಳವೇ ನಡೆದು ಹೋಗುತ್ತಿತ್ತು. ಕೇರಿಯ ಮನೆಗಳಲ್ಲಿ ಮಾಂಸ ಬೇಯಿಸುತ್ತಿರುವ ಘಮಘಮ ವಾಸನೆ ಬರುತ್ತಿದ್ದು.”[7] ದನ ಸತ್ತ ಕೂಡಲೇ ಕೇರಿಗೆ ಸುದ್ದಿ ಬರುವುದು, ಸತ್ತ ದನದ ಮಾಂಸಕ್ಕಾಗಿ ಕೇರಿಯ ಜನ ಮುಕ್ಕರಿಕೊಳ್ಳುವುದು– ಇವೆಲ್ಲಾ ಬಡತನ ಮತ್ತು ಹಸಿವಿಗೆ ಸಂಕೇತಗಳಾಗಿವೆ. ಕೊನೆಯಲ್ಲಿ ಬರುವ ಮಾಂಸದಡಿಗೆಯ ಘಮಘಮ ವಾಸನೆ ದಲಿತರ ಆಹಾರ ಸಂಸ್ಕೃತಿಯ ಪ್ರತೀಕವಾಗಿ ಬಳಕೆಗೊಂಡಿದೆ. ಆ ಘಮದ ವಾಸನೆಯಲ್ಲಿ ಅವರ ಬಡತನ, ಹಸಿವುಗಳು ಮಾಯವಾಗಿ ಹೋಗುತ್ತವೆ. ಆಗಂತ ಸತ್ತ ದನದ ಮಾಂಸವೇ ಅವರ ಮುಖ್ಯ ಆಹಾರವಲ್ಲ. ಬದುಕಿರುವ ದನವನ್ನು ಕೊಂಡುಕೊಳ್ಳುವ ಶಕ್ತಿ ಅವರಿಗಿಲ್ಲ. ಹಾಗಾಗಿ ಪಾಲಿಗೆ ಬಂದುದನ್ನೇ ಪಂಚಾಮೃತವೆಂದು ಸ್ವೀಕರಿಸಿದ್ದಾರೆ. ದಲಿತರ ಆಹಾರ ಪದ್ಧತಿಯ ಕುರಿತು ದೇವನೂರು ಮಹಾದೇವ ಅವರು “ದುರಂತವೆಂದರೆ–ಹೆಂಡ, ದನದ ಬಾಡು ನಮ್ಮ ಪಾಲಿಗೆ ಕೇವಲ ಆಹಾರ ಮಾತ್ರವಲ್ಲ. ಈ ಸಮಾಜದಲ್ಲಿ ಹೆಂಡ, ದನದ ಬಾಡಿನಲ್ಲಿ ಅವಮಾನ ಜೊತೆಗೂಡಿಸಲ್ಪಟ್ಟಿದೆ. ಹೆಂಡ ದನದ ಬಾಡು ಭಾರತದಲ್ಲಿ ಪ್ರತಿಷ್ಠಿತ ಹೋಟೆಲ್. ತಿಥಿ ಊಟ ಆಗುವವರೆಗೂ ಈ ಆಹಾರಕ್ಕೆ ಅಂಟಿಸಿರುವ ಅವಮಾನದಿಂದ ತಪ್ಪಿಸಿಕೊಳ್ಳುವುದು ಕಷ್ಟ. ಹಾಗಾದರೆ ಏನು ಮಾಡೋಣ? ಹೆಂಡ ತಪ್ಪೆ? ದನದ ಬಾಡು ತಪ್ಪೇ? ಅದರಲ್ಲಿ ಏನು ತಪ್ಪಿದೆ? ಹೆಂಡ, ದನದ ಬಾಡಿನಲ್ಲಿ ಅಡಗಿರುವ ಅವಮಾನ ತಪ್ಪು. ಹೆಂಡ ದನದ ಬಾಡಿನಲ್ಲಿ ಅಡಕವಾಗಿಸಿರುವ ಅವಮಾನದ ಅಂಶ ತೆಗೆದರೆ ಮಾತ್ರ ಇವೂ ಸಹಜ ‘ಆಹಾರ’ವಾಗುತ್ತವೆ”[8] ಎನ್ನುತ್ತಾರೆ. ಬಡತನ ಎನ್ನುವುದು ದಲಿತರನ್ನು ಆವರಿಸಿಕೊಂಡಿರುವುದರಿಂದ, ಅವರು ತಮ್ಮ ಆಹಾರ ಪದ್ಧತಿಯನ್ನು ಸಮರ್ಥಿಸಿಕೊಳ್ಳದೇ ಇದ್ದುದರಿಂದ ಅವರದು ಕೆಟ್ಟ ಆಹಾರವಾಯಿತು. ಹಾಗಾಗಿಯೇ ಬಡತನ ಮತ್ತು ಹಸಿವು ದಲಿತರ ಜೀವನ ಕ್ರಮವಾಯಿತು.

ದಲಿತರ ಬಡತನಕ್ಕೆ, ನೀಗಲಾರದ ಹಸಿವಿಗೆ ಕಾರಣವಾದದ್ದು ಅವರ ಶ್ರಮಕ್ಕೆ ದೊರೆಯಬೇಕಾದ ಪ್ರತಿಫಲ ದೊರೆಯದೇ ಇದ್ದುದು. ದಲಿತರಿಗೆ ಆಹಾರ ಸಂಪಾದನೆಯೇ ನಿತ್ಯದ ಸಾಹಸ ಮತ್ತು ಕಾಯಕ. ಅದರಲ್ಲಿ ಅವರು ಕೆಲವೊಮ್ಮೆ ಯಶಸ್ವಿಯಾಗುತ್ತಾರೆ, ಕೆಲವೊಮ್ಮೆ ಅವಮಾನಕ್ಕೀಡಾಗುತ್ತಾರೆ. ಆಹಾರಕ್ಕಾಗಿ ದಲಿತರು ಪರಿಪಾಟಲು ಪಡುವ ದಿನಗಳು ಈಗ ಕಡಿಮೆಯಾಗಿವೆ. ಆದರೆ ಇಪ್ಪತ್ತು–ಇಪ್ಪತ್ತೈದು ವರ್ಷಗಳ ಹಿಂದೆ ಆಹಾರಕ್ಕಾಗಿ ಅವರು ಪಡುತ್ತಿದ್ದ ಕಷ್ಟ, ಅನುಭವಿಸುತ್ತಿದ್ದ ನೋವುಗಳು ಹೇಳತೀರದವು. ಇವುಗಳನ್ನು ದಲಿತ ಆತ್ಮಕಥನಕಾರರು ತಮ್ಮ ಕಥನಗಳಲ್ಲಿ ತೆರೆದಿಟ್ಟಿದ್ದಾರೆ. ವ್ಯಕ್ತಿಗತ ಅನುಭವಗಳ ಮೂಲಕ ತಮ್ಮ ಸಮುದಾಯದ ಸಂಕಷ್ಟಗಳನ್ನು ಆತ್ಮಕಥನಕಾರರು ದಾಖಲಿಸಿದ್ದಾರೆ.

**ದಮನಿತರ ದನಿಯಾದ ಆತ್ಮಕಥೆಗಳು :**

ಕನ್ನಡ ದಲಿತ ಆತ್ಮಕಥೆಗಳು ಈಗಾಗಲೇ ಹೇಳಿದಂತೆ ಕೇವಲ ವೈಯುಕ್ತಿಕ ಅನುಭಗಳ ಪಾತಳಿಯಲ್ಲಿಯೇ ನಿಲ್ಲಲಿಲ್ಲ. ಅವು ಅವರು

---

[5] ಸಿದ್ಧಲಿಂಗಯ್ಯ : ಊರುಕೇರಿ, ಪುಟ.25

[6] ಎಲ್ಲಪ್ಪ ಕೆ.ಕೆ.ಪುರ : ಕೇರಿಯಿಂದ ತೇರಿಗೆ, ಪುಟ.4–5

[7] ವಿ.ಮುನಿವೆಂಕಟಪ್ಪ : ಅಂತ್ಯಜನ ಅಂತರಂಗ, ಸೂರ್ಯಪತ್ರಿಕೆ, ನವೆಂಬರ್ 2003, ಪುಟ.13–14

[8] ದೇವನೂರು ಮಹಾದೇವ : ಎದೆಗೆ ಬಿದ್ದ ಅಕ್ಷರ, ಪುಟ:50–51

ಬೆಳೆದು ಬಂದ ಸಮಾಜದ, ಸಮುದಾಯದ ಅನುಭವವನ್ನು ಅಭಿವ್ಯಕ್ತಪಡಿಸಿದವು. ಆತ್ಮಕಥೆಗಳು ಅದರಲ್ಲೂ ದಲಿತ ಸಮುದಾಯದಿಂದ ಬಂದಂತವರ ಆತ್ಮಕಥೆಗಳು ಕೇವಲ ವ್ಯಷ್ಟಿ ನೆಲೆಯಲ್ಲಿ ನಿಂತರೆ ಅವು ಸಾರ್ಥಕ ಹೊಂದುವುದಿಲ್ಲ. ಸಮಷ್ಟಿ ನೆಲೆಗಳನ್ನು ಒಳಗೊಂಡಾಗ ಮಾತ್ರ ವಿಶಿಷ್ಟವಾಗಿ ಕಾಣಲು ಸಾಧ್ಯವಾಗುತ್ತದೆ. ಏಕೆಂದರೆ ದಲಿತ ಆತ್ಮಕಥೆಗಳು ಒಬ್ಬನ ದನಿಯಲ್ಲ. ಬಾಯಿದ್ದೂ ಮಾತನಾಡಲಾರದ ಸಾವಿರಾರು ದನಿಗಳ ಕೂಗದು. ಹಾಗಾಗಿ ಅದು ಸಮುದಾಯದ ಅನುಭವವಾಗುತ್ತದೆ. ಆಗಲೇಬೇಕು ಸಹ. ಅಸಂಖ್ಯಾತ ಅನಕ್ಷರಸ್ಥ ದಲಿತರ ವೇದನೆಯ ಪ್ರತೀಕಗಳು ಈ ಆತ್ಮಕಥೆಗಳು.

ಕನ್ನಡದ ದಲಿತ ಆತ್ಮಕಥೆಗಳ ಒಟ್ಟು ಹಂದರವನ್ನು ಪರಿಶೀಲಿಸಿದಾಗ ಅಲ್ಲಿ ಮನುಷ್ಯ ಪ್ರೀತಿಗಾಗಿ, ತನ್ನತನದ ಹಂಬಲಕ್ಕಾಗಿ, ಬದುಕಿನ ಸುಧಾರಣೆಗಾಗಿ, ತನ್ನ ಪಾಲಿನ ಹಕ್ಕುಗಳಿಗಾಗಿ, ಸಮುದಾಯಗಳ ಏಳ್ಗೆಗಾಗಿ, ಸಮಸಮಾಜದ ನಿರ್ಮಾಣಕ್ಕಾಗಿ... ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಚಿಂತಿಸಿದ್ದು ಕಂಡುಬರುತ್ತದೆ. ಈ ಚಿಂತನೆ ವೈಚಾರಿಕ ನೆಲೆಯಲ್ಲಿ ಮೂಡಿಬಂದಿದೆ. ಆ ವೈಚಾರಿಕತೆ ಇಡೀ ಸಮುದಾಯದ, ಶೋಷಿತರ ದನಿಯಾಗಿ ಮೂಡಿಬಂದಿದೆ.

ಈ ಆತ್ಮಕಥೆಗಳಲ್ಲಿನ ದಲಿತ ಲೋಕದಲ್ಲಿನ ಬಡತನ, ದಲಿತೇತರರಲ್ಲಿನ ಭಂಡತನ ಮುಂತಾದವುಗಳು ಪ್ರತೀಕಾರದ ಹಿನ್ನೆಲೆಯಲ್ಲಿ ಚಿತ್ರಣಗೊಂಡಿಲ್ಲ. ದಲಿತರ ಸಂಕಟವನ್ನು ಅನಾವರಣಗೊಳಿಸುವುದರ ಜೊತೆಗೆ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಓದುರಗನ್ನು ಚಿಂತನೆಗೆ ಹಚ್ಚುತ್ತವೆ. ನಮ್ಮಲ್ಲಿರುವ ಪಾಪ ಪ್ರಜ್ಞೆಯನ್ನು ಬಡಿದೆಬ್ಬಿಸಿ ಹೊಸ ಅರಿವಿನ ಅಲೆಯನ್ನು ತೆರೆದಿಡುತ್ತವೆ. ದಲಿತ ಆತ್ಮಕಥೆಗಳಲ್ಲಿ ಬದುಕಿನ ಸಂಘರ್ಷವಿದೆ. ಆಹಾರಕ್ಕಾಗಿ ಹಾಹಾಕಾರವಿದೆ. ಇದನ್ನು ಸಮಾಜೋ–ಸಾಂಸ್ಕೃತಿಕ ನೆಲೆಯ ಬಹುದೊಡ್ಡ ಸಂಘರ್ಷವೆನ್ನಬಹುದು. ಈ ಸಂಘರ್ಷಕ್ಕೆ, ಹೊಸ ಅರಿವಿಗೆ, ಚಿಂತನೆಗೆ ಮುಖ್ಯ ಕಾರಣವಾದದ್ದು ಶಿಕ್ಷಣ. ತಮ್ಮವರ ಶ್ರಮದಿಂದ ಬಂದ ಬೆವರು, ಮತ್ತದರ ವಾಸನೆಯನ್ನು ಬಲ್ಲ ಈ ಆತ್ಮಕಥನಕಾರರು ತಮ್ಮವರ ಹಸಿವು, ಅವಮಾನ, ನೋವುಗಳ ಬಿಡುಗಡೆಗೆ ಶಿಕ್ಷಣವೊಂದೇ ಉತ್ತಮ ಮಾರ್ಗ ಎಂದು ನಂಬಿದರು. ಅಕ್ಷರ ಕಲಿತ ದಲಿತರು ತಾವೂ ಸಮಾಜದ ಮುಖ್ಯ ವಾಹಿನಿಯಲ್ಲಿ ಕಾಣಿಸಿಕೊಳ್ಳಬೇಕೆಂಬ ಹಂಬಲದಿಂದ, ತಮ್ಮ ಸಮುದಾಯದ ಸಾಂಸ್ಕೃತಿಕ ಬದುಕನ್ನು ಈ ಆತ್ಮಕಥೆಗಳಲ್ಲಿ ಅನಾವರಣಗೊಳಿಸಿದ್ದಾರೆ.

ತಮ್ಮ ಬದುಕಿನ ಹೋರಾಟಕ್ಕೆ ಪ್ರೇರಣೆಯಾದ ಅಂಬೇಡ್ಕರ್ ಅವರ ಚಿಂತನೆಗಳು, ಇತರೆ ಭಾಷಾ ಸಾಹಿತ್ಯದಲ್ಲಿ ಬಂದ ಅಂಶಗಳು, ಇತರೆ ಸಾಮಾಜಿಕ ಪ್ರಗತಿಪರ ಹೋರಾಟಗಾರರ ಜೀವನ... ಮುಂತಾದವುಗಳು ದಮನಿತರ, ಶೋಷಿತರ ಮನೋಸ್ಥೈರ್ಯವನ್ನು ಬಡಿದೆಬ್ಬಿಸಿ ಸ್ವಾಭಿಮಾನದತ್ತ ಕೊಂಡಯ್ಯಬಲ್ಲವು ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಈ ಭೂಮಿ, ಮಣ್ಣು, ನೀರು, ಗಾಳಿ, ಬೆಳಕುಗಳು ಎಲ್ಲಾ ಜೀವಿಗಳಿಗೂ ಸೇರಿದವುಗಳು. ಆದರೆ ಯಾರೋ ಇದು ತಮಗೇ ಸೇರಿದ್ದೆಂದು ವಾದಿಸಿ, ತಮಗೇ ದಕ್ಕಿಸಿಕೊಂಡಿದ್ದರ ವಿರುದ್ಧ ಇಲ್ಲಿ ಆಕ್ರೋಶವಿದೆ. ಸಂಪತ್ತು, ಭೂಮಿ, ಆಹಾರ, ಅಕ್ಷರ, ನೀರು ಮುಂತಾದವುಗಳ ಸಮಾನ ಹಂಚಿಕೆಯಾಗಬೇಕೆನ್ನುವುದರ ಬಗೆಗಿನ ಚಿಂತನೆಯಿದೆ. ನ್ಯಾಯಕ್ಕಾಗಿ ಪರಿತಪಿಸುವ ಇಲ್ಲಿನ ದನಿಗಳಲ್ಲಿ ಸಮುದಾಯದ ಕುರಿತ ಹಿತಚಿಂತನೆಯಿದೆ. ಶತಶತಮಾನಗಳಿಂದ ಅನುಭವಿಸಿ ಬದುಕಿತನ ಯಾತನೆಯನ್ನು ಅರ್ಥಮಾಡಿಕೊಳ್ಳದವರ ನಡುವಿನ ಬೌದ್ಧಿಕ ಸಂಘರ್ಷವಿದೆ. ಶ್ರೀಮಂತಿಕೆ ಮತ್ತು ಬಡತನದ ನಡುವಿನ ಬಹುದೊಡ್ಡ ಕಂದರಗಳನ್ನು ಮುಚ್ಚಿಹಾಕಬೇಕೆನ್ನುವ ಆಶಯ ಇಲ್ಲಿ ವ್ಯಕ್ತವಾಗಿದೆ.

ದಲಿತ ಆತ್ಮಕಥನಕಾರರು ಮಹಾಕನಸುಗಾರರು. ಈ ದೇಶದ ಪಟ್ಟಭದ್ರ ಶಕ್ತಿಗಳು ಯಾವುದನ್ನು ಪಾವಿತ್ರ್ಯ ಎನ್ನುವ ಪೋಷಾಕಿನಿಂದ ಬೆಚ್ಚಗಿರಿಸಿದ್ದರೋ ಅದನ್ನು ನಾಶಪಡಿಸಬೇಕು ಎನ್ನುವ ಹೋರಾಟಗಾರರು. ಇವರ ಭಾಷಿಕ ವಿನ್ಯಾಸವೂ ಸಹ ಅಪ್ಪಟ ದೇಶೀಯವಾದದ್ದು. ಹಾಗಾಗಿಯೇ ಅದು ಸಮುದಾಯನಿಷ್ಠ ಧ್ವನಿ ತರಂಗಗಳನ್ನು ಒಳಗೊಂಡಿದೆ. ಅವರು ತಮ್ಮ ಕೇರಿಗಳ ಸಮುದಾಯಗಳ ಒಳನುಡಿಗಳಿಂದ ತಮ್ಮದೇ ಆದ ಭಾಷಾಕೃತಿಯನ್ನು ನಿರ್ಮಿಸಿಕೊಂಡಿದ್ದಾರೆ. ಇದೇ ಈ ನೆಲದ ದಲಿತರ ಬದುಕಿನ ರೂಪಕಗಳನ್ನು ಸಮರ್ಥವಾಗಿ ಕಟ್ಟಿಕೊಡಲಿಕ್ಕೆ ಸಾಧ್ಯವಾಗಿದೆ.

**ಗ್ರಂಥಋಣ:**


1. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಅಭಿರುಚಿ ಪ್ರಕಾಶನ, ಮೈಸೂರು, 1994.
2. ಎಲ್ಲಪ್ಪ ಕೆ.ಕೆ.ಪುರ, ಕೇರಿಯಿಂದ ತೇರಿಗೆ, ಶ್ರೀಶಶಾ ಎಂಟರ್‌ಪ್ರೈಸಸ್, ನಾಗರಬಾವಿ, ಬೆಂಗಳೂರು, 2009
3. ಗೋವಿಂದರಾಜು ಕೆ., ಮನವಿಲ್ಲದವರ ಮಧ್ಯೆ, ಅಭಿರುಚಿ ಪ್ರಕಾಶನ, ಮೈಸೂರು, 2000
4. ತುಂಬಾಡಿ ರಾಮಯ್ಯ, ಮಣೆಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
5. ದು.ಸರಸ್ವತಿ, ಈಗೇನ್ ಮಾಡೀರಿ?, ಮಾನಸ ಪಂಚಾಯಿತಿ ರಸ್ತೆ, ಕಾಡಿಗೋಡು, ಬೆಂಗಳೂರು, 2001.
6. ಎಂ.ಎಸ್.ಪರಮಶಿವಮೂರ್ತಿ, ಗೆರೆದಾಟದ ಮೇಲೆ, ರೂಪ ಪ್ರಕಾಶನ, ಮೈಸೂರು, 2009
7. ಎಂ.ಎಂ. ಮದರಿ, ಗೊಂದಲಿಗ್ಯಾ, ಲೋಹಿಯಾ ಪ್ರಕಾಶನ, ಬಳ್ಳಾರಿ, 2012
8. ಮುಳ್ಳೂರು ನಾಗರಾಜ, ಮಾಮರದ ಮೇಲೊಂದು ಕೋಗಿಲೆ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, 2004
9. ಲಕ್ಷ್ಮಣ್, ಸಂಭೋಳಿ, ಮಾನಸ ಪಂಚಾಯಿತಿ ರಸ್ತೆ, ಕಾಡಿಗೋಡು, ಬೆಂಗಳೂರು, 2001.
10. ಸಿದ್ಧಲಿಂಗಯ್ಯ, ಊರುಕೇರಿ, ಭಾಗ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
11. ————, ಊರುಕೇರಿ, ಭಾಗ–2, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, 2006
12. ಹನುಮಂತರಾವ್ ಬಿ. ದೊಡ್ಡಮನಿ, ಪಂಚಮ, ಶಾಂತಕುಮಾರ್ ಪ್ರಕಾಶನ, ಮಲ್ಲಬಾದ್, ಗುಲಬರ್ಗಾ, 2009.
13. ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು, 2012.
14. ಜಿ.ಪ್ರಶಾಂತ ನಾಯಕ, ಕನ್ನಡ ಸಾಹಿತ್ಯ ಮತ್ತು ದಲಿತ ಪರಂಪರೆ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2007
15. ಮೊಗಳ್ಳಿ ಗಣೇಶ, ದಲಿತ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.